<u>ದಿಃ 30.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಮುಖ್ಯವಿಚಾರಣೆಃ ಶ್ರೀ ಆರ್.ಜಿ.ಕೆ., ವಾದಿ ಪರ ವಕೀಲರಿಂದಃ</u>

28. ನಾನು ಈ ದಿನ ನನ್ನ ಸಾಕ್ಷ್ಯ ಹೇಳಿಕೆ ಬಾಬ್ತು ನ್ಯಾಯಾಲಯಕ್ಕೆ ಹೆಚ್ಚುವರಿ ಪ್ರಮಾಣಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ನನ್ನ ಹೇಳಿಕೆ ಮೇರೆಗೆ ಸದರಿ ಪ್ರಮಾಣಪತ್ರಿಕೆಯನ್ನು ತಯಾರಿಸಲಾಗಿದೆ. ಇದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿವೆ.

29. ದಿಃ 6.6.2023 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿ.ಪಿ-54 ಎಂದು, ದಿಃ 20.9.2024 ರ ತಿದ್ದುಪಡಿ ಪತ್ರದ ದೃಢೀಕೃತ ನಕಲನ್ನು ನಿ.ಪಿ-55 ಎಂದು, ಋಣಭಾರ ಪತ್ರವನ್ನು ನಿ.ಪಿ-56 ಎಂದು, ತಹಶೀಲ್ದಾರ್ ರವರಿಗೆ ದಿಃ 18.10.2024 ಹಾಗು 4.11.2024 ರಂದು ನೀಡಿದ ಮನವಿ ಪತ್ರಗಳನ್ನು ನಿ.ಪಿ-57 ಮತ್ತು 58 ಎಂದು, ಸಹಾಯಕ ಕಂದಾಯ ಅಧಿಕಾರಿ ರವರಿಗೆ ದಿಃ 19.10.2024 ಹಾಗು 4.11.2024 ರಂದು ನೀಡಿದ ಮನವಿ ಪತ್ರಗಳನ್ನು ನಿ.ಪಿ-59 ಮತ್ತು 60 ಎಂದು, ಪೋಲೀಸ್ ರವರು ನೀಡಿದ ಷರಾ ವನ್ನು ನಿ.ಪಿ-61 ಎಂದು ಗುರುತಿಸಲಾಗಿದೆ.

ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಕೆ.ಎಸ್.ಭರತ್ ಕುಮಾರ್ )
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.